

# ವಾಣಿ ವನವಾಸ ಅಂತ್ಯ

ಸುಶಾಂತ್ ಸಿಂಗ್ ರಜಪೂತ್ ಮತ್ತು ಪರಿಣೀತಿ ಚೋಪ್ರಾ ಜತೆ 'ಶುದ್ಧ್ ದೇಸಿ ರೊಮ್ಯಾನ್ಸ್'ನಲ್ಲಿ ತೆರೆ ಹಂಚಿಕೊಂಡಿದ್ದ ವಾಣಿ ಕಪೂರ್, ಮತ್ತೆ ಎರಡನೇ ಸಿನಿಮಾಕ್ಕೆ ಬಣ್ಣ ಹಚ್ಚಿದ್ದು ಮೂರು ವರ್ಷದ ಬಳಿಕ. ರಣವೀರ ಸಿಂಗ್ ಜತೆಗಿನ ಚುಂಬನ ದೃಶ್ಯಗಳಿಂದ 'ಬೇಫಿಕ್ರೆ' ಚಿತ್ರದಲ್ಲಿ ವಾಣಿ ಸುದ್ದಿಯಲ್ಲಿದ್ದಾಳೆ. ಆದಿತ್ಯ ಚೋಪ್ರಾ ನಿರ್ಮಾಣದ ಜತೆಗೆ ನಿರ್ದೇಶನವನ್ನೂ ಮಾಡಿರುವ ಚಿತ್ರ, ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟು ಹಾಕಿದೆ. ಈ ಮೂರು ವರ್ಷಗಳ ಕಾಯುವಿಕೆಗೆ ಆದಿತ್ಯ ಚೋಪ್ರಾನೇ ಕಾರಣ ಎಂದಿದ್ದಾಳೆ ವಾಣಿ.

'ಅತ್ಯುತ್ತಮ ಮತ್ತು ಎಕ್ಸೈಟಿಂಗ್ ಎನಿಸುವ ಚಿತ್ರ ನನಗಾಗಿ ಬರುತ್ತದೆ ಎಂದು ಕಾದಿದ್ದೆ. ಆದಿತ್ಯ ಚೋಪ್ರಾನಿಂದಲೇ ಎರಡು ಸಿನಿಮಾಗಳ ನಡುವಣ ಅಂತರ ಉಂಟಾಗಿರುವುದು. ನಟಿಯಾಗಿ ತನ್ನದೇ ಪಾತ್ರವದು ಎನಿಸುವಷ್ಟು ಹೊಂದಿಕೊಳ್ಳುವ ಮತ್ತು ನ್ಯಾಯ ಒದಗಿಸಲು ಸಾಧ್ಯವಾಗುವಂತಹ ಪಾತ್ರವನ್ನು ಮಾಡು. ಅಲ್ಲಿಯವರೆಗೂ ತಾಳ್ಮೆಯಿಂದ ಕಾಯಿ ಎಂದು ಆದಿ ಹೇಳಿದ್ದ. ಕೊನೆಗೆ ಆತನ ಸಿನಿಮಾದಲ್ಲಿಯೇ ಅವಕಾಶ ಸಿಕ್ಕಿತು. 'ಬೇಫಿಕ್ರೆ' ಮುಗಿಸಲು ಆದಿ ಎರಡು ವರ್ಷ ತೆಗೆದುಕೊಂಡ. ಆದರೆ, ಈ ಕಾಯುವಿಕೆ ನನಗೆ ಖುಷಿ ತಂದಿದೆ' ಎಂದಿದ್ದಾಳೆ ಆಕೆ.

ಈ ಚಿತ್ರದಲ್ಲಿ ಚುಂಬನದ ಅನೇಕ ದೃಶ್ಯಗಳಿವೆಯಂತೆ. ಆದರೆ, ಇವು ಅಶ್ಲೀಲಕರವಾಗಿಲ್ಲ ಎನ್ನುವುದು ರಣವೀರ್ ಕೊಡುವ ಸಮರ್ಥನೆ. ಈ ಚಿತ್ರವನ್ನು ಮನೆಮಂದಿಯೆಲ್ಲರೂ ಮಕ್ಕಳೊಂದಿಗೆ ಕುಳಿತು ನೋಡಬಹುದು ಎಂದಿದ್ದಾನೆ ಆತ. ಡಿಸೆಂಬರ್ 8ರಂದು ಈ ಚಿತ್ರ ತೆರೆಗೆ ಬರಲಿದೆ



# ಆ್ಯಕ್ಷನ್ ಹೀರೊನೇ ಶಾಶ್ವತ!

ಚಿತ್ರರಂಗ ಹೀಗೆಯೇ, ಒಂದು ಬಗೆಯ ಸಿನಿಮಾ ಗೆದ್ದರೆ, ಅದರ ಬೆನ್ನಲ್ಲೇ ಅದೇ ಮಾದರಿಯ ವಸ್ತುವುಳ್ಳ ಸಿನಿಮಾಗಳು ಸಾಲು ಸಾಲು ಬರತೊಡಗುತ್ತವೆ. ಕನ್ನಡದಲ್ಲಿ ಈಗ ಹಾರರ್ ಸಿನಿಮಾಗಳ ಪರ್ವ ನಡೆಯುತ್ತಿದೆಯಲ್ಲ ಹಾಗೆ. ಈಗ ನಾಯಕನಿಗಿಂತಲೂ ಕಥಾ ಪ್ರಧಾನ ಚಿತ್ರಗಳೇ ಹೆಚ್ಚು ಜನಪ್ರಿಯವಾಗುತ್ತಿವೆ. ಬಾಲಿವುಡ್ ಇಂತಹ ಅನೇಕ ಪ್ರಯೋಗಗಳಿಗೆ ಅವಕಾಶ ನೀಡುತ್ತಿದೆ. ಒಂದು ಕಾಲದಲ್ಲಿ ಮೈನವಿರೇಳಿಸುವ ಆ್ಯಕ್ಷನ್ ಸಿನಿಮಾಗಳಿಗೇ ಹೆಚ್ಚು ಯಶಸ್ಸು ಇತ್ತು. ಈಗ ಆ್ಯಕ್ಷನ್ ಸಿನಿಮಾಗಳು ಪ್ರಯೋಗಗಳ ಸಂತೆಯಲ್ಲಿ ಕಳೆದು ಹೋಗುತ್ತಿವೆ. ಆದರೆ, ಜಾನ್ ಅಬ್ರಹಾಂ ಪ್ರಕಾರ ಆ್ಯಕ್ಷನ್ ಎಂದಿಗೂ ಸೋಲುವುದಿಲ್ಲ. ಆ್ಯಕ್ಷನ್ ಹೀರೊ ಎಂದಿಗೂ ಮೂಲೆ ಗುಂಪಾಗುವುದಿಲ್ಲ. ಚಿತ್ರರಂಗದಲ್ಲಿ ಕೊನೆವರೆಗೂ ಉಳಿಯುವಾತ ಆತನೇ ಎನ್ನುವುದು ಜಾನ್ ಅಭಿಪ್ರಾಯ. ಏಕೆಂದರೆ, ಆ್ಯಕ್ಷನ್ ಸಿನಿಮಾಗಳಿಗೆ ಇರುವ ಅಭಿಮಾನಿ ಸಮೂಹ ತುಂಬಾ ಹಿರಿದು. ಪ್ರಯೋಗಾತ್ಮಕ ಚಿತ್ರಗಳು ಗೆದ್ದರೂ ಅವುಗಳನ್ನು ಮೆಚ್ಚುವ ವರ್ಗ ಸೀಮಿತ. ಆ್ಯಕ್ಷನ್ ಸಿನಿಮಾಗಳೆಂದರೆ ಎಲ್ಲರೂ ಇಷ್ಟ ಪಡುತ್ತಾರೆ. ಪ್ರಯೋಗಾತ್ಮಕ ಚಿತ್ರಗಳನ್ನು ಮೆಚ್ಚುವವರೂ ಹೊಡೆದಾಟ, ಸಾಹಸೀಯ ಸಿನಿಮಾಗಳನ್ನು ಸಹ ಒಪ್ಪಿಕೊಳ್ಳುತ್ತಾರೆ ಎನ್ನುತ್ತಾನೆ ಆತ.

ಜಾನ್, 'ಫೋರ್ಸ್–2' ಚಿತ್ರದಲ್ಲಿ ಕಾಣಿಸಿಕೊಂಡಿದ್ದಾನೆ. ಇದು 2011ರಲ್ಲಿ ತೆರೆಕಂಡಿದ್ದ 'ಫೋರ್ಸ್' ಚಿತ್ರದ ಎರಡನೆಯ ಅವತರಣಿಕೆ. ಹಾಗೆ ನೋಡಿದರೆ, ಆ್ಯಕ್ಷನ್ ನೆಪದಲ್ಲಿ ಜಾನ್ ಏಕತಾನತೆಯ ಪಾತ್ರಗಳಲ್ಲಿ ಸಿಲುಕಿಕೊಳ್ಳುತ್ತಿದ್ದಾನೆ. ಆದರೆ, ಅದರ ಬಗ್ಗೆ ಆತನಿಗೆ ಭಯವಿಲ್ಲ. 'ಬಾಲಿವುಡ್ ಆಗಲಿ ಅಥವಾ ಹಾಲಿವುಡ್ ಆಗಲಿ, ಆ್ಯಕ್ಷನ್ ಹೀರೊ ಎಂದಿಗೂ ಉಳಿದುಕೊಳ್ಳುತ್ತಾನೆ. ಆ್ಯಕ್ಷನ್ ಸಿನಿಮಾಗಳು ಮಾಸ್ ಜನರಿಗಾಗಿ. ಒಬ್ಬ ನಟನ ದೃಷ್ಟಿಕೋನದಿಂದ ಹೇಳುವುದಾದರೆ ನನಗೆ ಅದು ಹೆಚ್ಚು ಸುರಕ್ಷಿತವಾದ ಜಾನರ್' ಎಂದಿದ್ದಾನೆ.